
ಮುಂದೆ ಹಿಡಿದರು. ನಾನು ತಬ್ಬಿಬ್ಬಾದೆ. ಇದು ನೀವು ಹೇಳುವ ಮಂತ್ರಾರತಿ ಯಾಕೋ ಸರಿಯಲ್ಲ ಅನ್ನಿಸುತ್ತದೆ. ಎಲ್ಲಕ್ಕಿಂತ ದೊಡ್ಡವನು ಲಿಂಗಯ್ಯಶಿವನು ಆತನ ಬಗ್ಗೆ ಹೇಳಿರಿ ಎಂದಾಗ ಪೂಜೆ ಮಾಡುತ್ತಿದ್ದ ಆತ ಯಾಕೋ ಸಿಟ್ಟಿಗೆದ್ದು ನನ್ನತ್ತ ನೋಡಿದ. ನೀವು ಬಾಗೇವಾಡಿಗೆ ಬರುವುದು ಇಲ್ಲಿಯ ಜನರಿಗೆ ತಿಳಿದಿರಲಿಲ್ಲ. ಇಲ್ಲದಿದ್ದರೆ ಜನಸಾಗರವೇ ನೆರೆದಿರುತ್ತಿತ್ತು ಎಂದು ಅಪ್ಪಣ್ಣಗಳು ಕಣ್ಣೀರು ಹಾಕಿದರು. ಅವರ ಕಣ್ಣೀರಿನ ಹನಿಗಳು ನನಗೆ ಕಲ್ಯಾಣದ ಚಿಂತೆಯ ಕತೆ ಹೇಳುತ್ತಿತ್ತು. ಹೊರಗೆ ಹೋದೆವು. ಪಕ್ಕದಲ್ಲಿರುವ ದೊಡ್ಡ ಬಾವಿಯತ್ತ ಹೆಜ್ಜೆ ಹಾಕಿ ಅಲ್ಲೇ ಸ್ನಾನ ಪೂಜೆಗಳನ್ನು ಮಾಡಿಕೊಂಡು ನಂದೀಶ್ವರನ ದಾಸೋಹದಲ್ಲೆ ಊಟ ಮಾಡಿದೆವು.

ಈ ಬಾವಿಗೆ ನನ್ನಣ್ಣ ದೇವರಾಜ, ನಾಗಮ್ಮ ಸ್ನಾನಕ್ಕೆ ಬರುತ್ತಿದ್ದ ನೆನಪು ಥಟ್ಟನೆ ಬಂತು. ನನ್ನ ಅಣ್ಣನ ವಯಸ್ಸಿನ ನಾಗವರ್ಮನೆಂಬ ಸ್ನೇಹಿತ ಈ ಬಾವಿಯಲ್ಲಿ ಬಿದ್ದು ಲಿಂಗೈಕ್ಯನಾಗಿದ್ದ. ಅದು ಮಂಡಿಗೆಯ ಮಾದರಸನ ಮಕ್ಕಳಾದ ನಾನು ನಾಗಮ್ಮ, ದೇವರಾಜರ ಮೇಲೆ ಆಪಾದನೆ ಬಂದಿತ್ತು. ನಾನು ಆ ಭಾವಿಯಲಿ ತದೇಕಚಿತ್ತದಿಂದ ನೋಡಿದೆ. ಪಕ್ಕದಲಿ ದೇವಸ್ಥಾನದ ತೋಟವಿತ್ತು. ಅದು ನನ್ನ ಸೋದರಮಾವ ಬಲದೇವ ಮಾವನವರು ದೇವಸ್ಥಾನದ ಖರ್ಚುವೆಚ್ಚಕ್ಕಾಗಿ ತೋಟವನ್ನು ಅವರೇ ಖರೀದಿಸಿದ್ದರು. ಇದೇ ತೋಟದಲಿ ಕುಳಿತು ಅವನ ಸಾವಿಗಾಗಿ ಚಿಂತಿಸಿದೆ, ಆತನ ಸಾವು ನನ್ನನ್ನು ದಿಗ್ಮೂಢನನ್ನಾಗಿ ಮಾಡಿತ್ತು. ಅಲ್ಲಿಯವರೆಗೆ ನಮ್ಮ ಜೊತೆ ಇದ್ದ ಮುಷ್ಟಿಯಲ್ಲಿ ಬೆಲ್ಲದ ಅಚ್ಚು ಹಿಡಿದು ತರುತ್ತಿದ್ದ ನಾಗವರ್ಮ ಇಲ್ಲವಾಗಿದ್ದ. ಅವನು ವೈದಿಕ ಮನೆತನದ ಹುಡುಗ. ಊರಲಿ ವೈದಿಕರಿಗೂ ನಮಗೂ ಆಗಲೇಕದನವೇರ್ಪಟ್ಟಿತ್ತು. ಆಗಮಿಕ ಕರ್ಮ ಬ್ರಾಹ್ಮಣನಾದ ಅಪ್ಪನ ಮೇಲೆ ಅವರು ಕತ್ತಿ ಮಸೆಯುತ್ತಿದ್ದರು. ಅವನು ಪುರಾಧೀಶ್ವರನಾಗಿದ್ದುದ್ದು ಅವರಿಗೆ ಯಾಕೋ ಸರಿ ಅನ್ನಿಸುತ್ತಿರಲಿಲ್ಲ. ಈ ವಿಷಯದಲ್ಲಿ ಹೇಗಾದರೂ ಮಾಡಿ ಅಪ್ಪನನ್ನು ಸಿಕ್ಕಿಸಿ, ಆತನನ್ನು ಪದಚ್ಯುತಿಗೊಳಿಸಬೇಕೆಂದು ವೈದಿಕ ಗಣದ ಅಧಿಪತಿ ಕೃಷ್ಣಾಚಾರ್ಯರು ಪಟ್ಟುಹಿಡಿದು, ರಾಜ್ಯ ಪಾಲಕರತ್ತ ದೂರು ಒಯ್ದಿದ್ದರು. ಅಪ್ಪನ ಗುಣ ಆತನ ಮಕ್ಕಳ ಗುಣಗಳ ಅರುವಿದ್ದ ರಾಜ್ಯಪಾಲಕರು ಈ ಘಟನೆಯನ್ನು ಅತ್ಯಂತ ಸಹಜ ರೀತಿಯಲ್ಲಿ ಬಗೆಹರಿಸಿದರು. ಅಂದು ಸಂಜೆ, ರಕ್ಕಸತಂಗಡಿ ರಸ್ತೆಯಲ್ಲಿ ನಾಗವರ್ಮನನ್ನು ಸುಡಲಾಯಿತು. ನೋಡು ನೋಡುತ್ತಿದ್ದಂತೆ ಅಗ್ನಿಗೆ ಆಹುತಿಯಾಗಿ ಹೋದ ನಾಗವರ್ಮನ ಸಾವು ನನಗೆ ವೈಯಕ್ತಿಕವಾಗಿ ಬಹುವಾಗಿ ಕಾಡಿತ್ತು, ಈಗಲೂ ಕಾಡುತ್ತದೆ.

ನನ್ನ ಜೊತೆಗೆ ಯಾವಾಗಲೂ ಇರುತ್ತಿದ್ದ ನನ್ನ ಮಾತು ಆಲಿಸುತ್ತ ಶಿವಾಗಮಗಳ ಕೇಳಲು ಮನೆಗೆ ಬರುತ್ತಿದ್ದ ನಾಗವರ್ಮ ನನ್ನಣ್ಣನ ವಯಸ್ಸಿನವನಾದರೂ ನನಗೆ ಅತ್ಯಂತ ಹತ್ತಿರದವನಾಗಿದ್ದ. ನಾನು ಸಂಗಮಕ್ಕೆ ಅಕ್ಕನ ಮನೆಗೆ ಹೋದಾಗ ಅವನು ಹಿಂಬಾಲಿಸಿ ಬಂದಿದ್ದ. ಅಲ್ಲಿಯ ಸಂಗಮನಾಥನನ್ನು ಕೈಯಿಂದ ಸ್ಪರ್ಶಿಸಿ ಘಟಪ್ರಭದಲ್ಲಿ ಯಥೇಚ್ಛವಾಗಿ ಈಜಿದ್ದ. ಇಂಥ ಗೆಳೆತನ ನಮ್ಮದಾಗಿತ್ತು. ಶಿವಾಗಮದ ಈ ಶ್ಲೋಕ ಆತನಿಗೆ ಬಹು ಅಚ್ಚುಮೆಚ್ಚಿನದಾಗಿತ್ತು. ಮನುಷ್ಯರ ಮಧ್ಯ ಯಾವುದೇ ಜಾತಿಗಳಿಲ್ಲ ಇವೆಲ್ಲ ನಾವು ಮಾಡಿಕೊಂಡ ಅನಿಷ್ಟಗಳು ಎಂದು ನಾನು ಹೇಳುವಾಗ ತದೇಕಚಿತ್ತದಿಂದ ಕೇಳುತ್ತಿದ್ದ ನಾಗವರ್ಮ ಈ ಬಾವಿಯ ಪ್ರತಿ ಅಂಗುಲದಲ್ಲೂ ನೆನಪುಗಳಾಗಿ ತುಂಬಿದ್ದಾನೆ ಎನ್ನಿಸಿತ್ತು.

ಎಷ್ಟೋ ದಿನಗಳ ಕಾಲ ನನಗೆ ನಿದ್ರೆಯೆಂಬುದು ಮರೀಚಿಕೆಯಾಗಿತ್ತು. ನಾನು ಅಪ್ಪ, ಅಮ್ಮನನ್ನು ನಮಗೆ ಪಾಠ ಹೇಳಿಕೊಡಲು ಬರುತ್ತಿದ್ದ ಶಿವಾದ್ವೈತ ಮುನಿಗೆ ಪದೇ ಪದೇ ಕೇಳುತ್ತಿದ್ದೆ, ಸಾವು ಎಂದರೇನು? ನಾಗವರ್ಮ ಏಕೆ ಸತ್ತ? ಆತನನ್ನು ಬದುಕಿಸಿಕೊಳ್ಳಲು ಸಾಧ್ಯವಿರಲಿಲ್ಲವೇ ಎಂದು. ನನ್ನ ಪ್ರಶ್ನೆಗಳಿಗೆ ಅಂತಹ ನಿಖರವಾದ ಉತ್ತರಗಳು ಯಾರಲ್ಲಿಯೂ ಇರಲಿಲ್ಲ. ಮತ್ತೆ ನೀರನ್ನು ಸ್ಪರ್ಶಿಸಿದೆ. ನಾಗವರ್ಮ ಬಸವ ಬಸವ, ನಾನು ಬರುತ್ತಿದ್ದ ಕಲ್ಯಾಣಕ್ಕೆ ನನ್ನನ್ನು ಬಿಟ್ಟು ಯಾಕೆ ಹೋದೆ ಎಂದು ಕೂಗಿದಂತಾಯಿತು. ಹೌದು ನನಗನಿಸುತ್ತಿದೆ. ಹದಿನಾರು ಆಗಮಗಳನ್ನು ಅಗ್ರಹಾರದ ವಿರೋಧದ ನಡುವೆಯೇ ಅಧ್ಯಯನ ಮಾಡಿದ ನಾಗವರ್ಮ ಖಂಡಿತವಾಗಿ ನನ್ನ ಜೊತೆ ಬರುತ್ತಿದ್ದ ಅನ್ನಿಸಿತು. ಆತನೂ ಒಬ್ಬ ಶರಣನಾಗಿರುತ್ತಿದ್ದ ಅನ್ನಿಸಿತು.

ನನ್ನ ಮುಖದ ಭಾವ ನೋಡಿ ಅಪ್ಪಣ್ಣನವರಿಗೆ ಅರ್ಥವಾಯಿತು ಅನ್ನಿಸುತ್ತದೆ. ನಿಮ್ಮ ಅಣ್ಣ




ದೇವರಾಜರು ಮತ್ತು ಅಕ್ಕ ನಾಗಮ್ಮನ ಜೊತೆ ನೀವು ಈಜಿದ ಕೊಳವಿದು. ಅದು ನೆನಪಾಯಿತೆ ಎಂದರು. ನನಗೆ ಕಣ್ಣಾಲಿಗಳು ತುಂಬಿಬಂದವು. ನನ್ನಣ್ಣ ದೇವರಾಜ ಮಡಿವಾಳ ಮಾಚಯ್ಯನಂಥವನು. ಅಕ್ಕ ತಮ್ಮ ಅಂದರೆ ಅವನಿಗೆ ಪ್ರಾಣ. ಅವನ ಶಿವಾಗಮಗಳನ್ನು ಬಾಯಿಯಿಂದ ಪಟಪಟ ಹೇಳುವವನಾಗಿದ್ದ. ಎಲ್ಲಕ್ಕಿಂತ ಹೆಚ್ಚಾಗಿ ಕರುಣಾಮೂರ್ತಿಯಾಗಿದ್ದ. ಅಪ್ಪನ ಜೊತೆ ಶಿವಾದ್ವೈತ ಪಂಡಿತರೊಂದಿಗೆ ನಾನು ವಾದಕ್ಕೆ ಇಳಿದರೆ ಅವನದೇ ಬೆಂಬಲ. ನಂದೀಶ್ವರನ ಬಾವಿಯ ಮೇಟಿಯ ಮೇಲಿಂದ ಜಿಗಿಯುವುದು ಅವನಿಗೆ ಎಲ್ಲಿಲ್ಲದ ಸಡಗರ. ಖಂಡಿತವಾಗಿ ಮುಂದೆ ನಾನು ಸಂಗಮದಿಂದ ಹೊರಟು ನಿಂತಾಗ ಅವನಿಗೆ ಅಕ್ಕ ಅಕ್ಕನಾಗಮ್ಮಳೊಂದಿಗೆ ಅವನೂ ಸಹ ಮಂಗಳವೇಡೆಗೋ ಅಥವಾ ಕಲ್ಯಾಣಕ್ಕೋ ಬರಲು ಹಿಂಬಾಲಿಸುತ್ತಿದ್ದ.

ಅಪ್ಪಣ್ಣನವರಿಗೆ ನಾನು ಹುಟ್ಟಿ ಬೆಳೆದ ಮನೆ ನೋಡಬೇಕಾಗಿತ್ತು. ನಾನು ಬೇಡವೆಂದರೂ ಅವರು ಕೇಳಲಿಲ್ಲ. ಅವರ ಒತ್ತಾಯಕ್ಕೆ ವೈದಿಕರ ಓಣಿಯಲ್ಲಿ ಅಶ್ವಥ ಮರದ ಎದುರು ಇರುವ ನಾನು ಹುಟ್ಟಿಬೆಳೆದ ಮನೆಗೆ ಹೋದೆವು.

ಅಶ್ವಥ ಮರ ಇನ್ನೂ ತನ್ನ ಬಾಹುಗಳನ್ನು ಚಾಚಿಕೊಂಡಿತ್ತು. ನಾನು ಸಣ್ಣವನಿದ್ದಾಗ ಈ ಮರ ಹತ್ತಿ ಮರಕೋತಿ ಆಟವಾಡುತ್ತಿದ್ದದು ನೆನಪಿಗೆ ಬಂತು. ಮನೆ ಹಾಳು ಬಿದ್ದಿತ್ತು. ಮನೆಯ ಪಕ್ಕದಲ್ಲಿದ್ದ ಅಪ್ಪನಿಗಿಂತಲೂ 7—8 ವರ್ಷ ದೊಡ್ಡವರಾಗಿದ್ದ ಕ್ರಮಿತನೆಂಬುವರು ಇದ್ದರು. ಅವರಿಗಾಗಲೇ ವಯಸ್ಸಾಗಿತ್ತು. ನಾವು ಚಿಕ್ಕವರಾಗಿದ್ದಾಗ ಆತ ನಮ್ಮನ್ನೆಲ್ಲ ಬಾಯಿಗೆ ಬಂದ ಹಾಗೆ ಬಯ್ದು ಕಳಿಸುತ್ತಿದ್ದರು, ಅವರ ಹೆಸರು ಈಗ ನೆನಪಿಗೆ ಬಂತು. ಶ್ರೀರಾಮಕ್ರಮಿತ್ರ ಅವರು ಒಂದು ಬಡಿಗೆ ಹಿಡಿದು ಆಲದ ಮರದ ಕೆಳಗೆ ಕುಳಿತಿದ್ದರು. ನಾವು ಬಿದ್ದು ಹಾಳಾದ ಮನೆಯನ್ನು ವೀಕ್ಷಿಸುತ್ತಿದ್ದಾಗ 'ಯಾರು ನೀವು, ಯಾರು ನೀವು, ಇದು ನನ್ನ ಮನೆ' ಎಂದು ಹೇಳಿದರು. ಹೌದು ಇದು ನಿಮ್ಮದೇ ಎಂದೆ. 'ಈ ಮನೆಯಲ್ಲಿ ಹಿಂದೆ ಇದ್ದವರು ದೀಪಕ್ಕೆ ದೀಪವಿಲ್ಲದವರಾಗಿ ಹೋಗಿದ್ದಾರೆ' ಎಂದ. ಅಪ್ಪಣ್ಣನವರಿಗೆ ಸಿಟ್ಟುಬಂತು. 'ಏನು ಮಾತಾಡ್ತೀಯ' ಎಂದು ಗುಡುಗಿದರು. ಆದರೆ ಆ ಮುದುಕ ಇನ್ನೂ ಗೊಣಗುತ್ತಲೇ ಇದ್ದ.

'ಕಲ್ಯಾಣದಲ್ಲಿ ಕೋಲಾಹಲವಂತೆ; ಮಾದಪ್ಪನ ಮಗ ಬಸವಣ್ಣ ಕಲ್ಯಾಣ ಹಾಳು ಮಾಡಿದ್ದಾನೆ. ನಿನ್ನೆ ಆತನ ಕೊಲೆ ಆಯಿತಂತೆ' ಎಂದು ರಾಮಕ್ರಮಿತ ಹೇಳಿದ. ಅಪ್ಪಣ್ಣನವರು ಏನೋ ಅನ್ನಲು ಹೋದರು. ಆದರೆ ನಾನು ಅವರನ್ನು ಸುಮ್ಮನಿರಿಸಿದೆ. 'ಬಸವಣ್ಣನ ಅಪ್ಪ ಅಮ್ಮನವರು ಸತ್ತಾಗ ಇಲ್ಲಿ ಅಂತ್ಯಸಂಸ್ಕಾರ ಮಾಡಲು ಜನರಿದ್ದಿಲ್ಲ. ಪಕ್ಕದ ಇಂಗಳೇಶ್ವರದಿಂದ ಒಂದು ಶವಸಂಸ್ಕಾರ